ದಿನಾಂಕ 30/10/2015 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎನ್.ವಿ. ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ನಾನು ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಎಂಎಲ್‌ಸಿ ಎಕ್ಸ್ ಟ್ರಾಕ್ಟನ್ನು ಹಾಜರುಪಡಿಸಿದ್ದು, ನಿಶಾನೆ ಪಿ-68 ಎಂದು, ಕೇಸ್ ಶೀಟ್ ಹಾಜರುಪಡಿಸಿದ್ದು, ನಿಶಾನೆ ಪಿ-69 ಎಂದು, ಒಂದು ಸಿಟಿ ಸ್ಕ್ಯಾನ್ ಫಿಲಂ ಹಾಜರುಪಡಿಸಿದ್ದು, ನಿಶಾನೆ ಪಿ-70 ಎಂದು, 10 ಎಕ್ಸ್‌ರೇಗಳನ್ನು ಹಾಜರುಪಡಿಸಿದ್ದು, ಒಟ್ಟಾಗಿ ನಿಶಾನೆ ಪಿ-71 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಹೆಚ್.ಆರ್.ಜೆ ವಕೀಲರಿಂದ

ಅರ್ಜಿದಾರರು ಪ್ರತಿತಿಂಗಳು ನಮ್ಮ ಆಸ್ಪತ್ರೆಗೆ ಬರುತ್ತಿದ್ದರು. ನಾನು ಅರ್ಜಿದಾರರಿಗೆ ಯಾವುದೇ ಶಸ್ತ್ರ ಚಿಕಿತ್ಸೆಯನ್ನು ಮಾಡಿರುವುದಿಲ್ಲ ಎಂದರೆ ಸುಳ್ಳು. ಅರ್ಜಿದಾರರಿಗೆ ನಾನು ಹೇಳುವಂತಹ ಗಾಯಗಳು ಆಗಿರಲಿಲ್ಲ ಎಂದರೆ ಸುಳ್ಳು. ಅವರಿಗೆ ಯಾವುದೇ ಮೂಳೆ ಮುರಿತ ಆಗಿರಲಿಲ್ಲ ಎಂದರೆ ಸುಳ್ಳು. ಅರ್ಜಿದಾರರು ಈಗಲೂ ಸಜ ಮೊದಲಿನಂತೆ ಆರೋಗ್ಯವಾಗಿದ್ದಾರೆಂದರೆ ಸುಳ್ಳು. ಆತನು ಎಂದಿನಂತೆ ಎಲ್ಲ ಕೆಲಸಗಳನ್ನು ಮಾಡಬಹುದು ಎಂದರೆ ಸುಳ್ಳು. ಆತನಿಗೆ ಯಾವುದೇ ಅಂಗ ನ್ಯೂನ್ಯತೆ ಇರುವುದಿಲ್ಲ ಎಂದರೆ ಸುಳ್ಳು. ಅರ್ಜಿದಾರನಿಗೆ ಇನ್ನೂ ಹೆಚ್ಚಿನ ಚಿಕಿತ್ಸೆಯ ಅವಶ್ಯಕತೆ ಇರುವುದಿಲ್ಲ ಎಂದರೆ ಸುಳ್ಳು. ಈ ರೀತಿಯ ಗಾಯಗಳು ಒಬ್ಬ ವ್ಯಕ್ತಿ ಮರದ ಮೇಲಿನಿಂದ ಬಿದ್ದರೆ ಆಗುವ ಸಾಧ್ಯತೆ ಇದೆ ಎಂದರೆ ಆ ರೀತಿ ಹೇಳಲು ಆಗುವುದಿಲ್ಲ. ಇತ್ತೀಚೆಗೆ ಆತನನ್ನು ಪರೀಕ್ಷೆ ಮಾಡಿದಾಗ ಆತನಿಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸುಳ್ಳು. ನಾನು ಹೇಳುವಂತೆ ಅರ್ಜಿದಾರನಿಗೆ ಯಾವುದೇ ಹಣ ಖರ್ಚಾಗಿರುವುದಿಲ್ಲ ಎಂದರೆ ಸುಳ್ಳು. ಅರ್ಜಿದಾರರಿಗೆ ಅನುಕೂಲವಾಗಲೀ

ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲೀ ಎಂದು ಹೆಚ್ಚಿನ ಪ್ರಮಾಣದ ನ್ಯೂನ್ಯತೆ ಇದೆ ಎಂದು ಹೇಳಿದ್ದೇನೆಂದರೆ ಸುಳ್ಳು.

ಮರು ವಿಚಾರಣೆಃ ಇಲ್ಲ

ತೆರೆದ ನ್ಯಾಯಾಲಯಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

**(ಎನ್. ಕೃಷ್ಣಯ್ಯ)**
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ, ಅರಕಲಗೂಡು.